ಶ್ರೀ ಬಿ. ಎಚ್. ಬೋರಣ್ಣಗೌಡರು (ಬೇಲೂರು).—25 ಬುಲ್‌ಡೋಸರುಗಳಿವೆಯೆಂದು ಹೇಳಿದೆ. ಅವೆಲ್ಲಾ ಸರಿಯಾಗಿವೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅವುಗಳಲ್ಲಿ ಏಳು ಸರಿಯಾಗಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅವನ್ನು ಸರಿ ಮಾಡುವುದಕ್ಕೆ ಎಷ್ಟು ದಿವಸಗಳು ಬೇಕು ?

Sri H. SIDDAVEERAPPA.—Sir, it is due to want of spare parts that some of these machines were not repaired in time.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಚಿಕ್ಕಮಗಳೂರಿಗೆ ಕೊಟ್ಟಿರುವ ಬುಲ್‌ಡೋಸರುಗಳೆಲ್ಲಾ ಸರಿಯಾಗಿ ಕೆಲಸ ಮಾಡುತ್ತಿವೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಎಷ್ಟು ಟ್ರ್ಯಾಕ್ಟರುಗಳು ಚೆನ್ನಾಗಿವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ನಮ್ಮಲ್ಲಿ 120 ಟ್ರ್ಯಾಕ್ಟರುಗಳಿವೆ. ಅವುಗಳಲ್ಲಿ ಕೆಲಸಮಾಡುತ್ತಿರುವ ವನ್ನು ತಮಗೆ ತಿಳಿಸಿದ್ದೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಪ್ರತಿಯೊಂದು ಜಿಲ್ಲೆಗೂ ಒದಗಿಸಿರುವುದು ಎಲ್ಲಾ ಸರಿಯಾಗಿವೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅವೆಲ್ಲವೂ ಸರಿಯಾದ ರೀತಿಯಲ್ಲಿರಲಿಲ್ಲವೆಂದು ಸರ್ಕಾರಕ್ಕೆ ಕಂಡು ಬಂದ ಮೇಲೆ ಅವನ್ನೆಲ್ಲಾ ಸರಿಯಾಗಿ ರಿಪೇರಿ ಮಾಡಿಕೊಂಡು ಕೆಲಸ ತೆಗೆದುಕೊಳ್ಳಬೇಕೆಂದು ಬೇರೆ ಏರ್ಪಾಡು ಮಾಡಿದ್ದಾರೆ. ಅದನ್ನು ಮಾನ್ಯ ಸಭೆಯ ಗಮನಕ್ಕೂ ತಂದಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಸನ ಜಿಲ್ಲೆಯಲ್ಲಿರುವ ಏಳು ಟ್ರ್ಯಾಕ್ಟರುಗಳಲ್ಲಿ ಒಂದೂ ಸರಿಯಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರಿಮಾಡಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಅದಕ್ಕೆ ನೇಮಕವಾಗಿರುವ ಡ್ರೈವರುಗಳು ಸರಿಯಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—That is the kind of stuff we have to deal with.

ಶ್ರೀ ಎಸ್. ಸಿದ್ದಪ್ಪನವರು.—ಟ್ರ್ಯಾಕ್ಟರುಗಳನ್ನು ನಡೆಸುವುದಕ್ಕೆ ಮೈಸೂರು ಸಂಸ್ಥಾನದಲ್ಲಿ ಡ್ರೈವರುಗಳು ಸಿಕ್ಕುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸಿಕ್ಕುತ್ತಾರೆ. ಆದರೆ ನಮ್ಮ ಕೆಲಸಕ್ಕೆ ಸರಿಯಾದವರು ಸಿಕ್ಕಬೇಕಾದರೆ ಬಹು ಕಷ್ಟ.

ಶ್ರೀ ಎಸ್. ಸಿದ್ದಪ್ಪನವರು.—ಅವರಿಗೆ ಶಿಕ್ಷಣ ಕೊಡುವುದಕ್ಕೆ ಸಾಧ್ಯವಿಲ್ಲವೆ ? ಶಿಕ್ಷಣ ಕೊಟ್ಟರೆ ಅವರು ಉತ್ತಮಸ್ಥಿತಿಗೆ ಬರುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಶಿಕ್ಷಣ ಕೊಟ್ಟರೂ ಪ್ರಯೋಜನವಿರುವಂತೆ ಕಾಣಲಿಲ್ಲ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು (ಕುಣಿಗಲು).—ಟ್ರ್ಯಾಕ್ಟರ್ಸ್ ಸಮಿತಿಯೆಂದು ಜಿಲ್ಲೆಗಳಲ್ಲಿ ಏರ್ಪಾಡು ಮಾಡಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಾಡಿದೆ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಅವು ಈ ಟ್ರ್ಯಾಕ್ಟರುಗಳು ಮತ್ತು ಬುಲ್‌ಡೋಸರುಗಳ ವ್ಯವಸ್ಥೆಯನ್ನು ಮಾಡುತ್ತಿವೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಾಡುತ್ತಿದ್ದವು. ಈಗಲೂ ಮಾಡುತ್ತಿವೆಯೆಂದು ಭಾವಿಸಿದ್ದೇನೆ.

ಶ್ರೀ ಟಿ ಎಚ್. ಮೂಡ್ಲಗಿರಿಗೌಡರು.—ಆ ಸಮಿತಿಗಳು ಎಷ್ಟು ತಿಂಗಳಿಗೊಂದು ಸಲ ಸೇರಬೇಕೆಂಬುದಕ್ಕೆ ಸರ್ಕಾರಿ ಆಜ್ಞೆಯೇನಾದರೂ ಇದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ತಿಂಗಳಿಗೆ ಒಂದು ಸಲ ಎಂದು ಕಾಣುತ್ತದೆ. I cannot say; I want notice to say definitely.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಬುಲ್‌ಡೋಸರು ಮತ್ತು ಟ್ರ್ಯಾಕ್ಟರುಗಳನ್ನು ಒಬ್ಬೊಬ್ಬ ರೈತನಿಗೆ ಎಷ್ಟು ದಿವಸ ಕೊಡಬಹುದು ?

ಶ್ರೀ ಎಚ್. ಸಿದ್ದವೀರಪ್ಪನವರು.—ಎಷ್ಟು ಕಾಲ ಬೇಕೋ ಅಷ್ಟು.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಒಂದು ವರ್ಷ ಕೊಡಬಹುದೆಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ. As I said, it all depends on given circumstances of each case.

ಶ್ರೀ ಬಿ. ರಾಚಯ್ಯನವರು (ಯಳಂದೂರು-ಅನುಸೂಚಿತ ಜಾತಿಗಳು).—ಓರ್ ಡೋಸರುಗಳು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಅವುಗಳ ಭಾಗಗಳನ್ನು ಕೆಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

Long Staple (M.A.V.) Cotton.

Q.—400. Sri K. PANCHAKSHARIAH (Arsikere).—

Will the Government be pleased to state :—

(*a*) whether it has come to their notice that even though long staple (M.A.V.) cotton is grown in plenty in our State, it has not been possible to secure good prices for it and our raiyats have sustained heavy losses to the tune of lakhs of rupees on account of the fact that the Agricultural Department has failed to sufficiently improve the seeds and supply good seeds to the raiyats;

(*b*) whether they have thought of supplying immediately good seeds of either Rajapalayam or Hubballi Laxmi variety to the raiyats and thereby prevent the huge losses to our State;

(*c*) whether any research work in connection with cotton cultivation is being conducted in the State;

(*d*) whether there is any necessity for the establishment of a separate research institute at Arsikere for carrying on such research ?

A.—**Sri H. SIDDAVEERAPPA** (Minister for Home Affairs and Agriculture).—

(*a*) It is not correct to say that the raiyats have sustained losses due to failure of Agricultural Department to sufficiently improve seeds and supply good seeds to ryots. In order to maintain purity and quality of M.A.V. cotton, the Department has a seed multiplication and supply programme of pure seed regional block on Government Farms; pure seed multiplication blocks in ryots' fields in all growing zones; and pure seed distribution blocks in bulk. The fall in prices is not due to quality of either seed or crops.

M.A.V. cotton has suffered a setback in prices, this year, along with other types of cotton due to general trade depression and other reasons beyond control.

(*b*) No. Does not arise in view of answer to (*a*) above.

(*c*) Yes.

(*d*) No.

ಶ್ರೀ ಕೆ. ಪಂಚಾಕ್ಷರಯ್ಯನವರು.—M. A. V. ಹತ್ತಿ ಹಾಸನ ಮತ್ತು ಕಡೂರು ಜಿಲ್ಲೆಗಳ ಕೆಲವು ಭಾಗದಲ್ಲಿ ಬಿತ್ತಬೇಕು, ಅಲ್ಲಿ ಬೇರೆ ಹತ್ತಿ ಬಿತ್ತಕೂಡದು ಎಂದು ಸರ್ಕಾರದವರು ನಿರ್ಬಂಧಿಸಿರುವುದು ಗಮನದಲ್ಲಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದೆ. ಬೇರೆ ಹತ್ತಿ ಬಿತ್ತಕೂಡದೆಂದು ನಿರ್ದಿಷ್ಟವಾಗಿ ಆಜ್ಞೆಮಾಡಿದೆ.

ಶ್ರೀ ಕೆ. ಪಂಚಾಕ್ಷರಯ್ಯನವರು.—ಆ ಹತ್ತಿಯನ್ನು ಒಮ್ಮೆ ಬಿತ್ತಿದ ಮೇರೆ ಏಳನೆಯ ಸಲಕ್ಕೆ ಬೀಜಕ್ಕೆ ಬರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ರೀತಿ ಏನೂ ಇಲ್ಲ.

ಶ್ರೀ ಕೆ. ಪಂಚಾಕ್ಷರಯ್ಯನವರು.—ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರಿಂದ ಅವರ ಶಿಫಾರಸಿನಂತೆ ಏಳನೆಯ ಸಲ ಅದು ಬಿತ್ತನೆಗೆ ಬರುವುದಿಲ್ಲವೆಂದು ಖಚಿತವಾಗಿ ಗೊತ್ತಾಗಿದೆ. ಅದನ್ನು ದಯವಿಟ್ಟು ಯೋಚನೆಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ರೀತಿ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಂಚಾಕ್ಷಯ್ಯನವರು.—ಹೋದ ವರ್ಷ ಬೊಂಬಾಯಿ ಮಾರ್ಕೆಟ್ಟಿಗೆ ಸ್ಪೆಷಲ್ ಹೆಚ್ಚಾಗಿ ಬಂದುದರಿಂದ ಅದರ ಬೆಲೆ ಹತ್ತಾಣಿಗೆ ಇಳಿದು ಅರಸೀಕೆರೆಯಲ್ಲಿ 50 ಲಕ್ಷ ರೂಪಾಯಿಗಳ ನಷ್ಟವಾಗಿದೆಯೆಂಬುದು ಗೊತ್ತೆ?

ಶ್ರೀ ಎಚ್. ಸಿದ್ದವೀರಪ್ಪನವರು—ಅದೇ ಕಾರಣವಲ್ಲ. ಪ್ರಪಂಚದಲ್ಲೇ ಹತ್ತಿ ಮಾರ್ಕೆಟ್ ಬೆಲೆ ಬಿದ್ದಿರುವುದು ಕಾರಣ; ಸ್ಪೆಷಲ್ ಕಾರಣವಲ್ಲ.

ಶ್ರೀ ಕೆ. ಪಂಚಾಕ್ಷರಯ್ಯನವರು.—M. A. V ಹತ್ತಿಗೆ ಸರಿಯಾದ ಬಲವಿಲ್ಲ, ಈಚೆಗೆ.....

Mr. SPEAKER.—Please put it in the form of a question.

ಶ್ರೀ ಕೆ. ಪಂಚಾಕ್ಷರಯ್ಯನವರು.—M. A. V ಹತ್ತಿಗಿಂತ ಲಕ್ಷ್ಮೀ ಮಾರ್ಕು ಮತ್ತು ಜಯವಂತ್ ಮಾರ್ಕು ಹತ್ತಿಯನ್ನು ಬೆಳೆಯುವುದರಿಂದ ನಮ್ಮದೇಶದಲ್ಲಿ ಅನೇಕ ಲಕ್ಷ ರೂಪಾಯಿಗಳ ವರಮಾನ ಬರುವುದರಿಂದ ಅದನ್ನೇ ಇಲ್ಲಿ ಬೆಳೆಯುವುದಕ್ಕೆ ಅನುಕೂಲಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದು ಸರಿಯಲ್ಲ. ಇಂಡಿಯಾದಲ್ಲಿ M. A. V. ಹತ್ತಿಗೆ ಉತ್ತಮವಾದ ಸ್ಥಾನವಿದೆ. ಇಂಡಿಯಾದಲ್ಲಿರುವ ಆರು ತರಹದ ಮೊದಲನೆಯ ದರ್ಜೆಯ ಹತ್ತಿಯಲ್ಲಿ M A. V ಸಹ ಒಂದು. ಅದಕ್ಕೆ ಮೊದಲನೆಯ ಸ್ಥಾನ ದೊರೆತಿದೆ. ಇದಕ್ಕೆ ಕಂಟ್ರೋಲ್ ದರ ಕೂಡ ನಿಗದಿ ಮಾಡದಿರುವುದರಿಂದ ಇಂಡಿಯಾ ಸರ್ಕಾರದವರು ರೈತರಿಗೆ ಅನುಕೂಲವಾಗಲೆಂದು ಉತ್ತೇಜನ ಕೊಟ್ಟಿದ್ದಾರೆ.

ಶ್ರೀ ಕೆ ಪಂಚಾಕ್ಷರಯ್ಯನವರು.—ಹೋದ ಸಾರಿ ಇಂಡಿಯಾ ಸರ್ಕಾರದವರು M. A. V. ಹತ್ತಿಗೆ ಸ್ಪೆಷಲ್‌ನಷ್ಟು ಶಕ್ತಿಯಿದೆಯೆಂದು ಸಬ್ಸಿಡಿ ರೂಪದಲ್ಲಿ ಕೊಟ್ಟಿರುವ ಸಹಾಯವನ್ನು ನಿಲ್ಲಿಸಿರುವುದೇಕೆಂಬುದನ್ನು ವಿಚಾರಿಸಿದ್ದೀರಾ?

Sri H. SIDDAVEERAPPA.—I cannot say that.

Sri A. BHEEMAPPA NAIK.—Has there not been agitation for extension?

Sri H. SIDDAVEERAPPA.—Yes, Sir.

Sri A. BHEEMAPPA NAIK.—Have they considered the desirability of having some zones in Holalkere, Chitaldrug and Davangere areas?

Sri H. SIDDAVEERAPPA.—For the propagation of this M.A.V. Cotton, climatic condition and the average rainfall and the nature of the soil, all these factors will have to be taken into consideration. I am getting the suggestion of my friend examined with a view to see whether these conditions could be fulfilled.

Sri A. BHEEMAPPA NAIK.—Have they considered the need for introducing the Jaiwanth in these areas?

Sri H. SIDDAVEERAPPA.—I will consider.

Sri A. BHEEMAPPA NAIK.—Have they considered the need to supply M.A.V., Jaiwanth and Laxmi seeds well before the sowing season commences in Chitaldrug District?

Sri H. SIDDAVEERAPPA.—I have considered and the suggestion of my Hon'ble Friend will be kept in view when we distribute these seeds in time.

ಶ್ರೀ ಬಿ. ಚಿಕ್ಕಣ್ಣನವರು (ಜಾವಗಲ್).—ಈ M.A.V. ಹತ್ತಿ ಎಳೆಯಲ್ಲಿ ಬಲವತ್ತಾಗಿರುದಲ್ಲ ಅಲ್ಲವೇ?

Sri H. SIDDAVEERAPPA.—It is said that it even beats Japanese cotton. It is one of the finest cotton India has produced and that pride of place goes to Mysore.

ಶ್ರೀ ಕೆ. ಲಕ್ಕಪ್ಪನವರು (ಜೆನ್ನರಾಯಪಟ್ಟಣ).—ಅರಸೀಕೆರೆ ತಾಲ್ಲೂಕಿನಲ್ಲಿ M. A. V ಹತ್ತಿ ಹೆಚ್ಚು ಎಕರೆಯಲ್ಲಿ ಬೆಳೆದಿರುವುದರಿಂದ ರಾಗಿ ಫಸಲು ಕಡಮೆಯಾಗಿದೆ ಎಂಬುದು ಗೊತ್ತೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹತ್ತಿಯೂ ನಮ್ಮ ದೇಶದ ನ್ಯಾಷನಲ್ ಎಕಾನಮಿಗೆ ಒಂದು ಮುಖ್ಯವಾದ ಪದಾರ್ಥ.

ಶ್ರೀ ಕೆ. ಲಕ್ಕಪ್ಪನವರು.—ಎಲ್ಲಿ ಹೆಚ್ಚು ಹತ್ತಿ ಬೆಳೆಯುತ್ತಾರೆಯೋ ಅಲ್ಲಿಗೆ ಹೆಚ್ಚು ಆಹಾರ ಒದಗಿಸುತ್ತೇವೆ ಎಂಬುದಾಗಿ ಕೇಂದ್ರ ಸರ್ಕಾರದವರು ಹೇಳಿದ್ದಾರೆಯೆ ?

Sri H. SIDDAVEERAPPA.—I want notice ?

ಶ್ರೀ ಕೆ. ಲಕ್ಕಪ್ಪನವರು.—ಕೇಂದ್ರ ಸರ್ಕಾರದವರು ಹಾಗೆ ಒಪ್ಪಿಕೊಂಡಿದ್ದ ಪಕ್ಷದಲ್ಲಿ ಅರಸೀಕೆರೆಗೆ ಹೆಚ್ಚು ಆಹಾರದವನ್ನ ಒದಗಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅರಸೀಕೆರೆಯಲ್ಲಿ ದವನಬೇಕೆಂದು ಕೇಳಿದರೆ ಕೊಡುತ್ತೇವೆ.

ಶ್ರೀ ಮುಲ್ಕ ಗೋವಿಂದರಡ್ಡಿಯವರು (ಚಿತ್ರದುರ್ಗ). ಈ ಹತ್ತಿಗೆ ಒಳ್ಳೆಯ ಬೆಲೆ (fair price) ಒದಗಿಸುತ್ತೀರಾ ?

Sri H. SIDDAVEERAPPA.—That is not within my competence.

ಶ್ರೀ ಮುಲ್ಕಾ ಗೋವಿಂದರಡ್ಡಿಯವರು.—ಇಂಡಿಯಾ ಸರ್ಕಾರದವರು ಅಲ್ಲ ಮಾಡುತ್ತಿಲ್ಲವೇ ?

Sri H. SIDDAVEERAPPA.—Anything that helps the agriculturist I will do.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ–ಅನುಸೂಚಿತ ಜಾತಿಗಳು).—M. A. V ಹತ್ತಿ ಎಂದು ಯಾವ ರೀತಿ ಸರ್ಟಿಫೈ ಮಾಡುತ್ತಿದ್ದೀರಿ. ಇದಕ್ಕೆ ಒಬ್ಬ ನಿರ್ದಿಷ್ಟವಾದ ಅಧಿಕಾರಿ ಇದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಡಿಪಾರ್ಟ್‌ಮೆಂಟ್‌ನವರು ಇದ್ದಾರೆ.

ಶ್ರೀ ಜಿ. ದುಗ್ಗಪ್ಪನವರು.—ಯಾವ ಸ್ಟೇಜ್‌ನಲ್ಲಿ M. A. V ಕಾರ್ಟ್ ಎಂದು ಸರ್ಟಿಫೈಮಾಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪನವರು.—ಬೀಜ ಹಾಕಿ ಹತ್ತಿ ಬಿಡಿಸಿ, ಜಿನ್‌ಗೆ ಹೋಗುವವರೆಗೂ ಅದರ ಮೇಲೆ ನಿಗ ಇಡುತ್ತೇವೆ.

———

Handing over the Bale Press Machine at Mandya to Arsikere Cotton Marketing Society.

Q.—401. **Sri K. PANCHAKSHARIAH** (Arsikere).—

Will the Government be pleased to state :—

(*a*) whether it is under their contemplation to hand over cotton bales pressing machine at Mandya to the Cotton Society at Arsikere ;

(*b*) the reason for not putting it into action till now ?

A.—**Sri H. SIDDAVEERAPPA** (Minister for Home Affairs and Agriculture).—

(*a*) Yes.

(*b*) The Arsikere Cotton Marketing Society has to put up buildings, etc., before the pressing machine is transferred. Action is being taken to transfer the press as early as possible after the necessary buildings are put up.

ಶ್ರೀ ಕೆ. ಪಂಚಾಕ್ಷರಯ್ಯನವರು.—ಈ ಪ್ರೆಸ್ಸಿಂಗ್ ಮೆಷಿನ್‌ನನ್ನು ತಗೆದುಕೊಂಡು ಹೋಗಿ ಫಿಕ್ಸ್ ಮಾಡುವುದಕ್ಕೆ ಕಟ್ಟಡದ ಅಭಾವ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಕಾರಣ ಅದಲ್ಲ. ಅದನ್ನು ಫಿಕ್ಸ್ ಮಾಡುವುದಕ್ಕೆ ಸರ್ಕಾರದವರಿಗೆ ಖರ್ಚು ಪೆಚ್ಚು ಜಾಸ್ತಿಯಾಗುತ್ತದೆ ಎಂದು ಅದು ತಡವಾಗಿದೆ ಎಂಬುದು ಗೊತ್ತೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ರೀತಿ ಇಲ್ಲ. ನಾನು ಹೇಳಿರುವ ಕಾರಣದಿಂದ ಅಲ್ಲಿ ಯಂತ್ರ ಫಿಕ್ಸ್ ಆಗಲಿಲ್ಲ.

———

Gazetted Posts in the Veterinary and Animal Husbandry Department.

Q.—409. **Sri N. HUCHMASTHYGOWDA** (Huliyurdurga).—

Will the Government be pleased to state :—

(*a*) the total number of posts in the gazetted cadre in the Veterinary and Animal Husbandry Department ;

(*b*) of these, the number of posts that were vacant on 1st April 1952 ;

(*c*) the number of posts that will fall vacant before 31st December 1952 ;

(*d*) among the present incumbents in the gazetted cadre of this Department, the number of persons who are holders of University Degree in Veterinary Science ;

(*e*) among the present incumbents in the non-gazetted cadre, the number of persons who are holders of University degree in Veterinary Science ?

A.—**Sri H. SIDDAVEERAPPA** (Minister for Home Affairs and Agriculture).—

(*a*) There are 28 posts in the gazetted cadre of this Department.